# ಕನ್ನಡ ವಿಷಯದ ಸೂಚನೆಗಳು

## ಅಗತ್ಯ ಕಲಿಕೆಯ ಫಲಗಳನ್ನಾಧರಿಸಿದ ಕಲಿಕಾ ಏಣಿ (10+80=90 ದಿನಗಳಿಗೆ)

1. ಕೋವಿಡ್ 19ರ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಲಭ್ಯವಿರುವ ಶೈಕ್ಷಣಿಕ ಅವಧಿಗೆ ಪೂರಕವಾಗಿ ನಲಿ-ಕಲಿ ತರಗತಿಗಳಿಗಾಗಿ ಅಗತ್ಯ ಕಲಿಕಾ ಅಂಶಗಳನ್ನು ಆಧರಿಸಿ ಚಟುವಟಿಕೆಗಳನ್ನು ನಿಗದಿಪಡಿಸಲಾಗಿದೆ.
2. ಪ್ರತಿ ದಿನ 80 ನಿಮಿಷಗಳ ಪ್ರತಿ ಅವಧಿಯಂತೆ ಈ ಕಲಿಕಾ ಪ್ರಕ್ರಿಯೆ ನಡೆಯುತ್ತದೆ.
3. 2020-21ನೇ ಶೈಕ್ಷಣಿಕ ಸಾಲಿನಲ್ಲಿ ತರಗತಿಗಳು ಪ್ರಾರಂಭವಾಗದೇ, ಈ (2021-22) ಶೈಕ್ಷಣಿಕ ಸಾಲಿನಲ್ಲಿ 1 ಮತ್ತು 2ನೇ ತರಗತಿಯ ಮಕ್ಕಳು ಯಾವುದೇ ಔಪಚಾರಿಕ ಕಲಿಕೆಯನ್ನು ಮಾಡದೆ ಹಾಲಿ ತರಗತಿಗಳಿಗೆ ದಾಖಲಾಗಿರುವುದರಿಂದ ಕಲಿಕಾ ಪ್ರಕ್ರಿಯೆಯ ದೃಷ್ಟಿಯಿಂದ ಒಂದೇ ಕೊಠಡಿಯಲ್ಲಿ 1 ಮತ್ತು 2ನೇ ತರಗತಿಗಳನ್ನು ಒಂದು ಗುಂಪಾಗಿ ಹಾಗೂ 3ನೇ ತರಗತಿಯನ್ನು ಇನ್ನೊಂದು ಗುಂಪಾಗಿ ಪರಿಗಣಿಸುವುದು. ಅಂದರೆ ಒಂದೇ ಕೊಠಡಿಯಲ್ಲಿ ಎರಡು ಗುಂಪುಗಳಲ್ಲಿ ಕಲಿಕೆ ನಡೆಯುತ್ತದೆ. 80 ನಿಮಿಷಗಳಲ್ಲಿ ಮೊದಲ 40 ನಿಮಿಷ 1 ಮತ್ತು 2ನೇ ತರಗತಿಗಳಿಗೂ ನಂತರದ 40 ನಿಮಿಷಗಳನ್ನು 3ನೇ ತರಗತಿಯ ಶಿಕ್ಷಕರ ಸಂಪೂರ್ಣ ಸಹಾಯದ (ಕಲಿಕಾಂಶ ಚಟುವಟಿಕೆಗಳಿಗೆ) ಕಲಿಕೆಗೆ ಮೀಸಲಿರಿಸಿಕೊಳ್ಳುವುದು. 1 ಮತ್ತು 2ನೇ ತರಗತಿಗೆ ಕಲಿಕಾಂಶ ಚಟುವಟಿಕೆ ನಡೆಯುವಾಗ 3ನೇ ತರಗತಿಗೆ ಪುನರ್ಬಲನ ಮತ್ತು ಮೌಲ್ಯಮಾಪನ ಚಟುವಟಿಕೆಗಳು ನಡೆಯುವಂತೆ ವ್ಯವಸ್ಥೆ ಮಾಡುವುದು. ಹಾಗೇ 3ನೇ ತರಗತಿಗೆ ಕಲಿಕಾಂಶ ಚಟುವಟಿಕೆ ನಡೆಯುವಾಗ 1 ಮತ್ತು 2ನೇ ತರಗತಿಗೆ ಪುನರ್ಬಲನ ಮತ್ತು ಮೌಲ್ಯಮಾಪನ ಚಟುವಟಿಕೆಗಳು ನಡೆಯುವಂತೆ ವ್ಯವಸ್ಥೆ ಮಾಡುವುದು
5. 1 ಮತ್ತು 2ನೇ ತರಗತಿಯಲ್ಲಿ ಯಾವುದೇ ಕಲಿಕಾಂಶವನ್ನು ಕೈಬಿಟ್ಟಿರುವುದಿಲ್ಲ. 3ನೇ ತರಗತಿಯಲ್ಲಿ ಸಾಮರ್ಥ್ಯಗಳನ್ನು ಒಗ್ಗೂಡಿಸಿ ಕಲಿಸಲು ಅವಕಾಶವಿರುವುದರಿಂದ 2ನೇ ಮೈಲಿಗಲ್ಲಿನ ಲಗೋರಿ ಆಟ ಮತ್ತು 11ನೇ ಮೈಲಿಗಲ್ಲಿನ ಕಾಡಿನ ರಾಜನ ಆಯ್ಕೆ ಇವುಗಳನ್ನು ಸಮ್ಮಿಳಿತಗೊಳಿಸಿ 9 ಮೈಲಿಗಲ್ಲುಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ.
6. ಈ ಕರೋನಾದ ವಿಶೇಷ ಸಂದರ್ಭದಲ್ಲಿ ಕಲಿಕಾಪ್ರಕ್ರಿಯೆಯನ್ನು ಕಲಿಕಾಂಶ, ಪುನರ್ಬಲನ ಮತ್ತು ಮೌಲ್ಯಮಾಪನ ಈ 3 ಗುಂಪುಗಳಲ್ಲಿ ಮಾತ್ರ ನಡೆಸಲು ತೀರ್ಮಾನಿಸಲಾಗಿದೆ.
7. ಹಾಲಿ ಇರುವ ಕಲಿಕಾ ಸಾಮಗ್ರಿಗಳೊಂದಿಗೆ ಹೆಚ್ಚುವರಿ ಸಾಮಗ್ರಿಗಳ ಅವಶ್ಯಕತೆ ಬಿದ್ದಲ್ಲಿ, ಅವಶ್ಯಕತೆಗೆ ತಕ್ಕಂತೆ ಸಾಮಗ್ರಿಗಳನ್ನು ಶಿಕ್ಷಕರೇ ಸಿದ್ಧಪಡಿಸಿಕೊಳ್ಳುವುದು. ಇಂತಹ ಸನ್ನಿವೇಶಗಳಲ್ಲಿ ಕೋವಿಡ್-19ರ ಸಂದರ್ಭದಲ್ಲಿ ಅನುಸರಿಸಬೇಕಾದ ಎಸ್.ಓ.ಪಿ.ಯನ್ನು ಗಮನದಲ್ಲಿರಿಸಿಕೊಳ್ಳುವುದು.
8. ಚಟುವಟಿಕೆಗಳನ್ನು ಮಾಡುವಾಗ ಕೋವಿಡ್-19ರ ಸಂದರ್ಭವನ್ನು ಗಮನದಲ್ಲಿರಿಸಿಕೊಂಡು ಮಕ್ಕಳ ನಡುವೆ ಸೂಕ್ತ ಅಂತರ ಕಾಪಾಡಿಕೊಳ್ಳುವುದರೊಂದಿಗೆ ಕಲಿಕಾ ಸಾಮಗ್ರಿಗಳನ್ನು ತೆಗೆದುಕೊಳ್ಳುವ ಮತ್ತು ಮರಳಿ ಇರಿಸುವ ಕಾರ್ಯವನ್ನು ಶಿಕ್ಷಕರೇ ನಿರ್ವಹಿಸುವುದು.
9. **ಕಲಿಕಾ ಮೂಲೆ:** ತರಗತಿಯಲ್ಲಿ ಸೂಕ್ತ ಸ್ಥಳವನ್ನು ಆಯ್ದುಕೊಂಡು ಅಲ್ಲಿ ಮಕ್ಕಳ ಓದಿಗೆ ಸಹಕರಿಸುವ ಹೆಚ್ಚುವರಿ ಉಳಿಕೆಯಾದ ವಾಚಕಗಳು, ಸಮ್ಮಿಳಿತಗೊಳಿಸಿರುವ ಮೆಟ್ಟಿಲಿನ ಕಾರ್ಡುಗಳು, ಓದುವೆ ನಾನು ಕಾರ್ಡುಗಳು, ಮಕ್ಕಳ ಕಥಾ ಪುಸ್ತಕಗಳು, ಚಿತ್ರಕಥಾ ಪುಸ್ತಕಗಳು ಇತ್ಯಾದಿಗಳನ್ನು ಸಂಗ್ರಹಿಸಿ ಕಲಿಕಾ ಮೂಲೆಯನ್ನು ಸಿದ್ಧಪಡಿಸಿಕೊಳ್ಳುವುದು. ಇದನ್ನು ಅವಶ್ಯಕತೆ ಬಿದ್ದಾಗ ಮಕ್ಕಳು ಬಳಸಿಕೊಳ್ಳಲು ಅವಕಾಶ ನೀಡುವುದು.
10. ಈಗಾಗಲೇ ದಿನಾಂಕ: 30.08.2021ರ ಸುತ್ತೋಲೆಯಲ್ಲಿ ತಿಳಿಸಿದಂತೆ ಸೆಪ್ಟಂಬರ್, ನವೆಂಬರ್, ಡಿಸೆಂಬರ್, ಫೆಬ್ರವರಿ ತಿಂಗಳುಗಳ ಕೊನೆಯಲ್ಲಿ FAಗಳನ್ನು(ರೂಪಣಾತ್ಮಕ ಮೌಲ್ಯಮಾಪನ) ನಡೆಸುವುದು. ಹಾಗೆಯೇ ಈ ಶೈಕ್ಷಣಿಕ ಸಾಲಿನಲ್ಲಿ ನಡೆಸ ಬೇಕಿರುವ ಒಂದು SA ಅನ್ನು ಏಪ್ರಿಲ್ ಅಲ್ಲಿ ನಡೆಸುವುದು. FA ಮತ್ತು SA ಗಳಿಗೆ ಪ್ರತ್ಯೇಕ ಚಟುವಟಿಕೆಗಳನ್ನು ನಡೆಸದೆ (ನಲಿಕಲಿಯಲ್ಲಿ ಮೌಲ್ಯಮಾಪನ ನಿರಂತರವಾಗಿ ನಡೆಯುವುದರಿಂದ) ಈಗಾಗಲೇ ಸದರಿ ಸುತ್ತೋಲೆಯಲ್ಲಿ ತಿಳಿಸಿರುವಂತೆ ಮಕ್ಕಳ ಕಲಿಕೆಯ ಶೇಕಡಾವನ್ನು ಕಂಡುಹಿಡಿದು ಅದನ್ನು ಶ್ರೇಣಿಗಳಿಗೆ ಬದಲಿಸಿ ವೈಯಕ್ತಿಕ ಪ್ರಗತಿ ದಾಖಲೆ ಹಾಗೂ SATS ನಲ್ಲಿ ದಾಖಲಿಸುವುದು.